# ಅಕಟಕಟ ಎನ್ನ ಗಂಡ

(Version 2)

1. **Ref.**: Sri Purandara Dasara Krutigalu – Sri Gorebala Hanumantha Rayara Hasta Prati Sangrahadinda – Published by Sri Varadendra Haridasa Sahitya Mandala, Lingasuguru, Raichur Dist., Karnataka (2013), page No. 254.
2. **Note:** This song version is not available in the books of Shri Betageri Krishna Sharma and Shri Bengeri Huchha Rayaru and also in the books of Sri. Pavanje Guru Rao and also in the books of Prof. S.K. Ramachandra Rao.
3. **Note:** Singer has followed these lyrics.
4. **Note:** There is one more song - listed as “akka akaTakaTA enna ganDa” (“ಅಕ್ಕಾ ಅಕಟಕಟಾ ಎನ್ನ ಗಂಡ”). In this, the wordings are different.

ರಾಗ: ಸೌರಾಷ್ಟ್ರ ತಾಳ: ಏಕ

ಅಕಟಕಟ ಎನ್ನ ಗಂಡ ವೈಷ್ಣವನಾದ ಕಾರಣ
ಪುಕ್ಕಟೆ ಎನ್ನ ಬದುಕು ಬಟ್ಟ ಬಯಲಾಯಿತೆ ॥ ಪ ॥

ಕಾರ-ಹುಣ್ಣಿವಿ ಮೊದಲಾದ ದಿನದಲ್ಲಿ ಲಶುನ ವೃಂತಾಕ
ತೊರೆದರೆ ನಮ್ಮ ದೇವರು ತೃಪ್ತಿಯಾಗೋವೆ
ವೀರ ವೈಷ್ಣವರಾಗಿ ಮಡಿಮಡಿಯಂದು ಕುಣಿಸಲಾಗಿ
ತೂರಿದ ಹೊಟ್ಟಂತೆ ಬದುಕು ಸೂರೆಯಾಗಿ ಹೋಯಿತೆ ॥ ೧ ॥

ಯಲ್ಲಮ್ಮ ಚೌಡಮ್ಮ ಬನದಶಂಕರಿ ಭಜಿಸೊ ಕಾಲದಲ್ಲಿ
ಬಲ್ಲಾ ಬಲ್ಲಾದಿ ಹೊನ್ನು ಅಳದು ಸುಖದಲ್ಲಿದ್ದವೆ
ಎಲ್ಲಾ ದೇವರು ಮಡುವಿಗೆ ಹಾಕಿ ಕರಿಯ ಕಲ್ಲು ಭಜಿಸಲಾಗಿ
ಎಲ್ಲಿ ಇಟ್ಟಿದ್ದಲ್ಲೆ ಪೋಗಿ ಈ ಬಟ್ಟೆಬೀಗದವ ॥ ೨ ॥

ಅಡ್ಡ ಗಂಧ ಭಸ್ಮವನ್ನು ಗಂಡಸರು ಹಚ್ಚೊ ಕಾಲಕ್ಕೆ
ಬಡ್ಡಿ ಬಾಚಿ ಕೊಟ್ಟು-ಕೊಂಡು ಸುಖದಲ್ಲಿದ್ದವೆ
ದಡ್ಡತನವ ಮಾಡಿ-ಮಟ್ಟಿ ಮುದ್ರೆ ಎಂದು ಹಚ್ಚಿದರಿಂದ

ಬಡ್ಡಿ ಬಾಚಿ ಹೋಗಿ ಬಾಯಿಲಿ ಗಡ್ಡಿ ಬಿದ್ದಂತಾಯಿತೇ ॥ ೩ ॥

ಹೆಡಗೀ ತಾಳಿ ಸರವ ಕೊರಳೊಳಗೆ ಕಟ್ಟಿದಾಗೆಲ್ಲ
ವಡವೆ ವಸ್ತ್ರಯುಕ್ತರಾಗಿ ಸುಖದಿಂದ್ದೇವೆ
ಬಡಿವಾರ ಹೇಳುವಳಲ್ಲ ತಾಳಿ ಸರವ ತೆಗದಿಂದೀಗ
ವಡವಿ ವಸ್ತ್ರ ಹೋಗಿ ಬಾಯಿಲಿ ಹುಡಿಯು ಬಿದ್ದಂತಾಯಿತೆ ॥ ೪ ॥

ಹತ್ತು ಎಂಟು ತಿಂಗಳಿಗೊಮ್ಮೆ ಹಬ್ಬ ಬಂದರೆ ಮದುವಿ ಮುಂಜಿಗೆ
ಭಕ್ತಿಯಿಂದ ಕಚ್ಚಿ ನಾವು ಹಾಕುತ್ತಿದ್ದೇವೆ
ನಿತ್ಯ ಕಚ್ಚಿ ಹಾಕಿ ಪುರಂದರ ವಿಠ್ಠಲನ ಭಜಿಸಿದರಿಂದ ಯತ್ತ
ಹೋಗದಂತೆಮಗೆ ಹರಿ-ಪುರ ಬಂಧನದಾ ಮನಿಯಾಯಿತೆ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದ ವೈಷ್ಣವ ಭಾಗವತರ ಹಿರಿಮೆಯನ್ನು ಮಾರ್ಮಿಕವಾಗಿ ಕಾಣಿಸುತ್ತದೆ.

**ಗಡ್ಡೆ –** ಮಣ್ಣಿನ ಉಂಡೆ.

**ಹೆಡಿಗೆ –** ಹೆಡಗೆ; ಬುಟ್ಟಿ. ಬಿದಿರಿನ ಬುಟ್ಟಿಯಲ್ಲಿ ದೇವರ ಮೂರ್ತಿಗಳನ್ನಿರಿಸಿಕೊಂಡು ಪೂಜೆಯ ಕಾಲದಲ್ಲಿ ಅವನ್ನೆಲ್ಲ ಹೊರಕ್ಕೆ ತೆಗೆದು ಪೂಜೆ ಸಲ್ಲಿಸುವ ವಾಡಿಕೆಯನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಹಲವಾರು ದೇವರುಗಳನ್ನು ಕ್ಷುದ್ರ ಫಲಪ್ರದಗಳಾಗಿ ಪೂಜಿಸುವ ಮನೋಧರ್ಮ ಇಲ್ಲಿನ ತಾತ್ಪರ್ಯ.

**ಕಚ್ಚೆ –** ಭಾಗವತ ಸಂಪ್ರದಾಯದ ಸ್ಮಾರ್ತರಲ್ಲಿ ಹೆಂಗಸರು ವಿಶೇಷ ಸಂದರ್ಭಗಳಲ್ಲಿ ಮಾತ್ರ ಹೊರಕಚ್ಚೆಯನ್ನು ಹಾಕಿ ಸೀರೆಯನ್ನುಡುತ್ತಾರೆ; ಉಳಿದಂತೆ ಒಳಕಚ್ಚೆ. ವೈಷ್ಣವ ಭಾಗವತರಾದರೋ ಪ್ರತಿ ದಿನವೂ ಹೊರಕಚ್ಚೆಯ ಸೀರೆಯನ್ನೇ ಉಡುವರು.

**ಸೇರಿದಾ ಬದುಕು –** ಇಲ್ಲಿಯವರೆಗೆ ಬಾಳಿದ ಬದುಕು.

**ಎಲ್ಲಮ್ಮ... ಚೌಡಮ್ಮ –** ಸಣ್ಣ ಪುಟ್ಟ ಗ್ರಾಮ ದೇವತೆಗಳು; ಅವರ ಶಿಲಾಮೂರ್ತಿಗಳನ್ನೇ ದೇವರೆಂದು ಬಗೆದು ಪೂಜಿಸುವಾಗ.

**ಲಶುನ** = ಬೆಳ್ಳುಳ್ಳಿ

**ವೃಂತಾಕ** = ಬದನೇಕಾಯಿ

**ಬಲ್ಲಾ** = ಒಂದು ಗೋಣಿಚೀಲದಷ್ಟು ಅಳತೆ

**ಹುಡಿ** = ಮಣ್ಣು

**Classification:** Keerthane
**Ankita:** purandara vittala
**Location:** NA
**Category:** Jeevana Darshana
**Sub-Category:** pati, deva, madi, baduku, devi, bhajane, bangara, sukha, gandha, bayi, abharana, vastra, Krishna, mane,
**Pravachana:** NA
**Explanation:** NA